ಸಿ) ಅಂತಹ ಕೃಷಿ ಆಹಾರ ಸಂಸ್ಕರಣಾ ಘಟಕಗಳು ನೇರವಾಗಿ ರೈತರಿಂದ ಹಣ್ಣು ಮತ್ತು ತರಕಾರಿಗಳನ್ನು ಒಪ್ಪಂದ ಮೇಲೆ ಖರೀದಿಸುವಲ್ಲಿ, ಎ.ಪಿ.ಎಂ.ಸಿ. ನಿಯಮಗದಡಿ ನೀಡಬೇಕಾದ ಮಾರುಕಟ್ಟೆ ಕರ:ಶುಲ್ಕಕ್ಕೂ ಸಹ ನೀಡಬೇಕಾಗುವುದಿಲ್ಲ.

ಡಿ) ಕೈಗಾರಿಕಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಕೊಳ್ಳುವ ಕೃಷಿ ಜಮೀನಿಗೆ ಮಾರ್ಪಾಡು ಶುಲ್ಕವನ್ನು ನೀಡಬೇಕಾಗುವುದಿಲ್ಲ. ಆದರೆ, ಅದಕ್ಕೆ ಹೊಂದಿಕೊಂಡಂತಹ ಕೈಗಾಗಿಕೆಗಳಿಗೆ ರಿಯಾಯಿತಿ ನೀಡುವಾಗ ಪ್ರತಿ ಒಂದರಲ್ಲಿ ಅದನ್ನು 100 ಎಕರೆಯೊಳಗಾಗಿರುವಂತಹ ಪ್ರಕರಣಗಳಲ್ಲಿ ಮಾತ್ರ ಅನ್ವಯಿಸುತ್ತದೆ.

ಇ) ಕೃಷಿ ಸಂಸ್ಕರಣಾ ಘಟಕಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಷ್ಟ್ರೀಯ:ಅಂತರರಾಷ್ಟ್ರೀಯ ವಸ್ತು ಪ್ರದರ್ಶನ:ಕಾರ್ಯಾಗಾರದಲ್ಲಿ ಭಾಗವಹಿಸಲು ಸರ್ಕಾರದಿಂದ ಪ್ರೋತ್ಸಾಹ ಭತ್ಯೆ ಯೋಜನೆಯನ್ನು ಪ್ರತ್ಯೇಕವಾಗಿ ತಯಾರಿಸಲಾಗುವುದು.

ಎಫ್) ಹೊಸ ಕೈಗಾರಿಕಾ ನೀತಿಯಲ್ಲಿ ಲಭ್ಯವಿರುವ ಪ್ರೋತ್ಸಾಹಕ ಭತ್ಯೆಯನ್ನು ಕೃಷಿ ಉತ್ಪನ್ನ ಸಂಸ್ಕರಣಾ ಘಟಕಗಳಿಗೂ ಸಹ ನೀಡಲಾಗುವುದು.

ಜಿ) ಸರ್ಕಾರಿ ಆದೇಶ ಸಂ:ಸಿಐ 167 ಎಸ್‌ಪಿಐ 2001, ದಿನಾಂಕ:20–6–2001 ರಂತೆ ಅನುಬಂಧದಲ್ಲಿ ವಿವರಿಸಿರುವ ಕೈಗಾರಿಕೆ ಉದ್ದಿಮೆಗಳಿಗೆ ಪ್ರೋತ್ಸಾಹಕ ಭತ್ಯ ನೀಡಲಾಗುತ್ತದೆ.

ಹೆಚ್) ತಾಂತ್ರಿಕ ವರ್ಗಾವಣೆ ವೆಚ್ಚವನ್ನು ಮತ್ತು ಸಮಾಲೋಚನಾ ಶುಲ್ಕವನ್ನು ಗರಿಷ್ಠ 25,000–00ಕ್ಕೆ ಒಳಪಟ್ಟು ಮರುಪಾವತಿ ಮಾಡಲಾಗುತ್ತದೆ.

ಈ) 'ಇ' ಯಲ್ಲಿ ನೀಡಿರುವಂತೆ.

ಕೃಷಿ ಇಲಾಖೆಗೆ ಕೇಂದ್ರ ಸರ್ಕಾರದ ಅನುದಾನ

3207 (3716) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಇಲಾಖೆಯ ಅನೇಕ ಯೋಜನೆಗಳಿಗೆ ಕೇಂದ್ರ ಸರ್ಕಾರ ನೀಡುತ್ತಿರುವ ಸಹಾಯಧನ ಎಷ್ಟು: ಯಂತ್ರೋಪಕರಣಗಳು, ಇತ್ಯಾದಿ ವಿವರ ಕೊಡುವುದು;

ಆ) ಇದರ ಜೊತೆಗೆ ರಾಜ್ಯ ಸರ್ಕಾರ ಕೃಷಿ ಒತ್ತುಕೊಟ್ಟು ಎಷ್ಟು ಸಹಾಯಧನವನ್ನು ನೀಡಲಾಗಿದೆ: ವಿವರ ಕೊಡುವುದು;

ಇ) ಕೇಂದ್ರ ಸರ್ಕಾರ ನೀಡುತ್ತಿರುವ ಸಹಾಯಧನವನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಲಾಗಿದೆಯೇ;

ಈ) ಎಲ್ಲಾ ಸಹಾಯಧನವನ್ನು ರೈತರು ಪೂರ್ಣವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಯೇ? (ಜಿಲ್ಲಾವಾರು ಮಾಹಿತಿ ನೀಕೊಡುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) 2003–04ನೇ ವರ್ಷಕ್ಕೆ ಕೃಷಿ ಇಲಾಖೆಯ ವಿವಿಧ ಯೋಜನೆಗಳಿಗಾಗಿ ಕೇಂದ್ರ ಸರ್ಕಾರವು ರೂ.2770.48 ಲಕ್ಷ ಅನುದಾನವನ್ನು ನೀಡುತ್ತಿದೆ. ಆ ಪೈಕಿ ಯಾಂತ್ರೀಕರಣ ಕಾರ್ಯಕ್ರಮಕ್ಕಾಗಿ ರೂ.313.00 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಯೋಜನೆವಾರು ವಿವರಗಳನ್ನು ಅನುಬಂಧ–1ರಲ್ಲಿ ಒದಸಿದೆ.

ಆ) ಇದರ ಜೊತೆಗೆ ರಾಜ್ಯ ಸರ್ಕಾರವು ತನ್ನ ಪಾಲಿನ ರೂ.490.99 ಲಕ್ಷಗಳನ್ನು ನೀಡಲಿದೆ. ಇದರ ಕಾರ್ಯಕ್ರಮವಾರು ವಿವರಗಳನ್ನು ಅನುಬಂಧ–1ರಲ್ಲೇ ನೀಡಲಾಗಿದೆ.

ಇ) ಹೌದು

ಈ) ಹೌದು

ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿನಲ್ಲಿ ಬೆಳೆ ವಿಮೆ

3211(3682) : ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿಗೆ ಕಳೆದ ಸಾಲಿನಲ್ಲಿ ಬೆಳೆ ವಿಮೆ ಮಂಜೂರಾಗಿದಿಯೇ;

ಆ) ಆಗದಿದ್ದರೆ ಕಾರಣವೇನು;

ಇ) ಮಂಜೂರು ಮಾಡಿರುವ ಕ್ರಮ ಕೈಕೊಳ್ಳಲಾಗಿದಿಯೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರಾಗಿ, ಜೋಳ, ಸೂರ್ಯಕಾಂತಿ ನೆಲಗಡಲೆ(ಶೇಂಗಾ) ಕಬ್ಬು ಮತ್ತು ಹತ್ತಿ (ಮಳೆ ಆಶ್ರಿತ) ಹಾಗೂ ಚಾಮರಾಜನಗರ ತಾಲ್ಲೂಕಿನಲ್ಲಿ ರಾಗಿ ಜೋಳ, ಸೂರ್ಯಕಾಂತಿ, ನೆಲಗಡಲೆ (ಶೇಂಗಾ), ಭತ್ತ (ನೀರಾವರಿ) ಮತ್ತು ಕಬ್ಬು ಬೆಳೆಗಳನ್ನು 2002ರ ಮುಂಗಾರು ಹಂಗಾಮಿನಲ್ಲಿ ಬೆಳೆ ವಿಮೆ ವ್ಯಾಪ್ತಿಗೆ ತರಲಾಗಿತ್ತು. ಈ ಬೆಳೆಗಳಲ್ಲಿ ರಾಗಿ, ಜೋಳ ಮತ್ತು ಸೂರ್ಯಕಾಂತಿ ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಿರುತ್ತದೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ. ಭತ್ತ ಮತ್ತು ನೆಲಗಡಲೆ (ಶೇಂಗಾ) ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಮಾಹಿತಿಯನ್ನು ಕ್ರೋಢೀಕರಿಸುತ್ತಿದೆ. ಸಧ್ಯದಲ್ಲೇ ಬೆಳೆ ವಿಮಾ ನಷ್ಟ ಪರಿಹಾರವನ್ನು ಬಿಡುಗಡೆ ಮಾಡಲಾಗುವುದು. ಕಬ್ಬು ಮತ್ತು ಹತ್ತಿ ಬೆಳೆಗಳು ಧೀರ್ಘಾವಧಿ ಬೆಳೆಗಳಾಗಿದ್ದು, ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಇನ್ನೂ ಬೆಳೆ ಕಟಾವು ಪ್ರಯೋಗಗಳ ಇಳುವರಿ ಮಾಹಿತಿಯು ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಬರಬೇಕಾಗಿದೆ.

ಆ) ಭತ್ತ (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) ಬೆಳೆಗಳಿಗೆ ಭಾರತೀಯ ಸಾಮಾನ್ಯ ವಿಮಾ ನಿಗಮವು ಮಾಹಿತಿಯನ್ನು ಕ್ರೋಢೀಕರಿಸುತ್ತಿರುವುದರಿಂದ ಹಾಗೂ ದೀರ್ಘಾವಧಿ ಬೆಳೆಗಳಾದ ಕಬ್ಬು ಮತ್ತು ಹತ್ತಿ ಬೆಳೆಗಳ ಇಳುವರಿ ಮಾಹಿತಿ ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಇನ್ನೂ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಕಳುಹಿಸದೇ ಇರುವ ಪ್ರಯುಕ್ತ, ಈ ಬೆಳೆಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವುದು ತಡವಾಗಿರುತ್ತದೆ.

ಇ) ಭತ್ತ (ನೀರಾವರಿ) ಹಾಗೂ ನೆಲಗಡಲೆ (ಶೇಂಗಾ) ಬೆಳೆಗಳಿಗೆ ಮಾಹಿತಿಯನ್ನು ಕ್ರೋಢೀಕರಿಸಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಸೂಚಿಸಲಾಗಿದೆ. ಕಬ್ಬು ಮತ್ತು ಹತ್ತಿ ಬೆಳೆಗಳ ಬೆಳೆ ಕಟಾವು ಪ್ರಯೋಗಗಳ ಇಳುವರಿ ಮಾಹಿತಿಯನ್ನು ಆಗಸ್ಟ್ 2003ರ ಅಂತ್ಯದ ಒಳಗೆ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ಭಾರತೀಯ ಸಾಮಾನ್ಯ ವಿಮಾ ನಿಗಮಕ್ಕೆ ಕಳುಹಿಸಲಿದೆ.